ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾಸನ

ಸ್ಪೆಷಲ್ ಕೇಸ್ ನಂಃ **749/2023**

| | ಚಾಸಾಃ **2** | ಅಸಾಃ **2** |
|---|---|---|
| ಹೆಸರು | ಕುಮಾರಿ | |
| ಗಂಡನ ಹೆಸರು : | ರಂಗಪ್ಪ | |
| ವಯಸ್ಸು: | 53 ವರ್ಷ | |
| ಕೆಲಸಃ | ಗೃಹಿಣಿ | |
| ವಾಸಸ್ಥಳ | ಚನ್ನರಾಯಪಟ್ಟಣ ಹೌಸಿಂಗ್ ಬೋರ್ಡ್ | |

ದಿನಾಂಕಃ **29.10.2025** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ

ನಾನು 6ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ.ನನಗೆ ಕನ್ನಡ ಓದಲು ಬರೆಯಲು ಸ್ವಲ್ಪ ಸ್ವಲ್ಪ ಬರುತ್ತದೆ. ಆರೋಪಿತರು ನನಗೆ ಗೊತ್ತು. 1ನೇ ಆರೋಪಿಯವರು ನಮ್ಮ ಮನೆಯ ಎದುರುಗಡೆ ಇರುತ್ತದೆ. 1ನೇ ಆರೋಪಿ ಮಡಿವಾಳ ಶೆಟ್ಟಿ ಜನಾಂಗಕ್ಕೆ ಸೇರಿರುತ್ತಾರೆ. 2ನೇ ಆರೋಪಿ ನನ್ನ ಸೊಸೆ. ನನಗೆ ಇಬ್ಬರು ಗಂಡು ಮಕ್ಕಳು. ಮೊದಲನೇ ಮಗ ರವಿಕುಮಾರ್, 2ನೇ ಮಗ ವಿಜಿಕುಮಾರ್. 2ನೇ ಆರೋಪಿ ತಟ್ಟೆಹಳ್ಳಿ ಗ್ರಾಮದವರು. 2ನೇ ಆರೋಪಿಯನ್ನು ರವಿಕುಮಾರ್ ರವರು 4 ವರ್ಷದ ಹಿಂದೆ ಮದುವೆಯಾಗಿದ್ದರು. ಮದುವೆಯಾದ ನಂತರ 2ನೇ ಆರೋಪಿ ನಮ್ಮ ಮನೆಯಲ್ಲಿಯೇ ವಾಸ ಮಾಡುತ್ತಿದ್ದರು. ನನ್ನ ಮೊದಲನೇ ಮಗ ದಿ. 08.10.2023 ರಂದು ತೀರಿಕೊಂಡಿರುತ್ತಾರೆ.

2. 1 ಮತ್ತು 2ನೇ ಆರೋಪಿಯವರಿಗೆ ಅನೈತಿಕ ಸಂಬಂಧ ಇದುದರಿಂದ ನನ್ನ ಮಗ ಗನ್ನಿ ಹೊಳೆಗೆ ಬಿದ್ದು ತೀರಿಕೊಂಡಿರುತ್ತಾರೆ. ನನ್ನ ಮಗ ನಮಗೆ 1 ಮತ್ತು 2ನೇ ಆರೋಪಿಯವರ ಅನೈತಿಕ ಸಂಬಂಧವನ್ನು ರೆಕಾರ್ಡ್ ಮಾಡಿದ್ದನ್ನು ನಮಗೆ

ತೋರಿಸಿದ್ದರು. ಈ ವಿಚಾರ ಗೊತ್ತಾದ ನಂತರ 2ನೇ ಆರೋಪಿಗೆ ಸಾಕಷ್ಟು ಬಾರಿ ಅವರಿಗೆ ಬುದ್ಧಿವಾದ ಹೇಳಿರುತ್ತೇವೆ. ನನ್ನ ಯಜಮಾನರು ಮತ್ತು ಅವರ ಸ್ನೇಹಿತರು ಅವರಿಗೆ ಪದೇ ಪದೇ ಬುದ್ಧಿ ಹೇಳಿದರು ಅವರು ಅದೇ ತಪ್ಪು ಮಾಡುತ್ತಿದ್ದರು. ಈ ಬಗ್ಗೆ ಪೊಲೀಸ್ ಠಾಣೆಯಲ್ಲಿ ಮಗ ಸಾಯುವುದಕ್ಕಿಂತ ಮುಂಚೆ ಪಂಚಾಯಿತಿ ಮಾಡಿರುತ್ತಾರೆ. ದಿನಾಂಕವನ್ನು ಮರೆತಿರುತ್ತೇನೆ. ಠಾಣೆಯಲ್ಲಿ ಮಾಡಿದ ಪಂಚಾಯಿತಿಯಲ್ಲಿ ಚಾಸಾ-3 ಮತ್ತು 4 ರವರು ಹಾಜರಿದ್ದರು. 2 ಬಾರಿ ಮನೆಯಲ್ಲಿ ಪಂಚಾಯಿತಿ ಮಾಡಿದ್ದರು, ಆ ಸಮಯದಲ್ಲಿ2ನೇ ಆರೋಪಿಯವರ ಅಕ್ಕ-ನಯನ, ಬಾವ-ಮಂಜು, ಅಣ್ಣ-ರಾಜಕುಮಾರ್, ಅಮ್ಮ-ಪಾರ್ವತಮ್ಮ ಹಾಜರಿದ್ದರು. ನಾನು ಮತ್ತು ನನ್ನ ಯಜಮಾನರು ಸಹಾ ಪಂಚಾಯಿತಿಯಲ್ಲಿ 2ನೇ ಆರೋಪಿ ಹಾಜರಿದ್ದೆವು. ಪಂಚಾಯಿತಿಯಲ್ಲಿ 2ನೇ ಆರೋಪಿಯವರ ಕಡೆಯವರು ಸಹಾ ನನ್ನ ಮಗನಿಗೆ ಮತ್ತು 2ನೇ ಆರೋಪಿಯವರಿಗೆ ಸರಿಯಾಗಿ ಹೊಂದಿಕೊಂಡು ಹೋಗಲು ಹೇಳಿರುತ್ತಾರೆ.

3. 2ನೇ ಆರೋಪಿಗೆ ಸರಿಯಾಗಿ ನಡೆದುಕೊಂಡು ಹೋಗಲು ಎಲ್ಲರೂ ಸೇರಿ ಬುದ್ಧಿವಾದ ಹೇಳಿರುತ್ತಾರೆ. 2ನೇ ಆರೋಪಿ ಒಪ್ಪಿಕೊಂಡು ಮತ್ತೆ ಅದೇ ತಪ್ಪನ್ನು ಮಾಡುತ್ತಿದ್ದರು. ಆಗ ನನ್ನ ಮಗ ಜೀವಂತವಾಗಿದ್ದ. 2ನೇ ಆರೋಪಿಯವರು ನನ್ನ ಮಗನಿಗೆ ನೀನು ಶೆಂಡ ನನ್ನ ಮಗ ನಾನು 1ನೇ ಆರೋಪಿಯ ಜೊತೆ ಹೋಗುವುದೇ ವಾಸಿ ನಿನಗೆ ಮಕ್ಕಳು ಇಲ್ಲ ಎಂದು ಬೈಯುತ್ತಿದ್ದರು. 2ನೇ ಆರೋಪಿಯವರು ನನ್ನ ಮಗನಿಗೆ ಹಂಗಿಸಿ ಮಾತನಾಡುತ್ತಿದ್ದರಿಂದ ಅವನಿಗೆ ಬೇಸರವಾಗಿರುತ್ತದೆ. 2ನೇ ಆರೋಪಿ ನನ್ನ ಮಗನೊಂದಿಗೆ ಹೊಂದಾಣಿಕೆ ಮಾಡಿಕೊಂಡಿರುವುದಿಲ್ಲ. ನನ್ನ ಮಗ ಮನನೊಂದು 2ನೇ ಆರೋಪಿಯವರು 1ನೇ ಆರೋಪಿಯವರ ಜೊತೆ ಅನೈತಿಕ ಸಂಬಂಧ ಇಟ್ಟುಕೊಂಡಿರುವುದರಿಂದ ಸಮಾಜದಲ್ಲಿ ತಲೆ ಎತ್ತಿ ತಿರುಗಾಡಲು ಆಗುವುದಿಲ್ಲ ನಾನು ಸಾಯುತ್ತೇನೆ ಎಂದು ಹೇಳುತ್ತಿದ್ದರು.

4. 2ನೇ ಆರೋಪಿಗೆ ಅನೈತಿಕ ಸಂಬಂಧ ಇದೆ ಎಂಬ ವಿಚಾರ, ನನ್ನ ಮಗ ಆತ್ಮಹತ್ಯೆ ಮಾಡಿಕೊಂಡ 15 ದಿನಗಳ ಮುಂಚೆ ನಮಗೆ ಗೊತ್ತಾಗಿರುತ್ತದೆ. ಈ ವಿಚಾರಕ್ಕೆ ಠಾಣೆಯಲ್ಲಿ ಒಂದು ಬಾರಿ, ಮನೆಯ ಹತ್ತಿರ 2 ಬಾರಿ ಪಂಚಾಯಿತಿ ಆಗಿರುತ್ತದೆ. ನನ್ನ ಮಗ 2ನೇ ಆರೋಪಿಗೆ ಅನೈತಿಕ ಸಂಬಂಧ ಇರುವ ಬಗ್ಗೆ ಗೊತ್ತಾದ ನಂತರ ಈ ಬಗ್ಗೆ ದೂರು ಕೊಡುತ್ತೇನೆ ಎಂದು ಹೇಳಿದರು, ಅದಕ್ಕೆ 2ನೇ ಆರೋಪಿಯವರು ನಮ್ಮ ಮೇಲೆ ವರದಕ್ಷಿಣೆ ಕೇಸು ಹಾಕಿ ದೂರು ಕೊಡುವುದಾಗಿ ಬೆದರಿಕೆ ಹಾಕಿದಳು.

5. 1ನೇ ಆರೋಪಿಯವರನ್ನು ನಾವು ಯಾಕೆ ಈ ರೀತಿ ತಪ್ಪನ್ನು ಮಾಡುತ್ತಿದ್ದೀರಾ ಎಂದು ಕೇಳಿದಕ್ಕೆ, 1ನೇ ಆರೋಪಿಯು ನಿಮ್ಮ ಸೊಸೆಯನ್ನು ಇಟ್ಟುಕೊಂಡಿದ್ದೇನೆ ಹಿಂದೆಯೇ ಕೂಡ ಹೊಲೆಯರನ್ನು ಸೂಳೆಯಾಗಿ ಇಟ್ಟುಕೊಳ್ಳುತ್ತಿದ್ದರು ಎಂದು ಹೇಳಿದರು. 1 ಮತ್ತು 2ನೇ ಆರೋಪಿಯವರು ನಮಗೆ ಕೆಟ್ಟದಾಗಿ ಬೈಯುತ್ತಿದ್ದರು. 1ನೇ ಆರೋಪಿ ನನ್ನ ಮಗನಿಗೆ ಶೆಂಡ ನನ್ನ ಮಗನೇ ನಿನ್ನ ಹೆಂಡತಿಯನ್ನು ಇಟ್ಟುಕೊಂಡಿದ್ದೇನೆ ಏನು ಮಾಡಿಕೊಳ್ಳುತ್ತೀಯಾ ಮಾಡಿಕೋ ಎಂದು ಬೈದು ಗಲಾಟೆ ಮಾಡುತ್ತಿದ್ದರು. ಆ ಸಮಯದಲ್ಲಿ ಚಾಸಾ-4 ಮತ್ತು 5 ರವರು ಇದ್ದು ಸಮಾಧಾನ ಮಾಡಿದರು.

6. ದಿ. 08.10.2023 ರಂದು ನನ್ನ ಮಗ ಕಾಣೆಯಾಗಿರುತ್ತಾನೆ. ಅವನಿಗೆ ಬೈಕ್ ಇದ್ದು, ಸಂಜೆ 4.00 ಗಂಟೆಗೆ ಮನೆ ಬಿಟ್ಟಿರುತ್ತೇನೆ. ಅವನು ಎಲ್ಲಿಯೋ ಹೋಗಿರಬೇಕು ಎಂದು ತಿಳಿದುಕೊಂಡೆ. ರಾತ್ರಿ ಮನೆಗೆ ವಾಪಸ್ಸು ಬಂದಿರಲಿಲ್ಲ. ಮಾರನೇ ಬೆಳಿಗ್ಗೆ ಎಲ್ಲಾ ಕಡೆ ಹುಡುಕಾಡಿದೆವು. ನನ್ನ ಯಜಮಾನರು ಬೈಕ್ ಮುಖಾಂತರ ನನ್ನ ಮಗ ಮೃತಪಟ್ಟಿರುವುದನ್ನು ಕಂಡು ಹಿಡಿದಿರುತ್ತಾರೆ. ದಿ. 10.10.2023 ರಂದು ನನ್ನ ಮಗನ ಶವ ಸಿಕ್ಕಿರುತ್ತದೆ. ಆರೋಪಿತರೇ ನನ್ನ ಮಗನ ಸಾವಿಗೆ ಕಾರಣರಾಗಿರುತ್ತಾರೆ.

7. ನನ್ನ ಮಗ ಕಾಣೆಯಾಗಿದ್ದಾಗ ನಾನು ಮನೆಯಲ್ಲಿದ್ದೆ. ಬಿಳಿ ಹಾಗೂ ಹಳದಿ ಬಣ್ಣದ ಲೈನ್ ಇರುವ ಶರ್ಟ್, ಕಪ್ಪು ಬಣ್ಣದ ಚಡ್ಡಿ ಹಾಕಿಕೊಂಡು

ಮನೆಯಿಂದ ಆಚೆ ಹೋಗಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಶರ್ಟನ್ನು ಅದೇ ಶರ್ಟ್ ಎಂದು ಹೇಳಿರುತ್ತಾರೆ. ಸಾಕ್ಷಿ ಕಾಫಿ ಬಣ್ಣದ ಒಳಉಡುಪು ಮತ್ತು ಮಗನ ಮೊಬೈಲ್‌ನ್ನು ನ್ನು ಸಹಾ ನೋಡಿ ಗುರುತಿಸಿರುತ್ತಾರೆ. ಅವುಗಳನ್ನು

ಮುಮಾ-1ಃ - ಕಪ್ಪು ಬಣ್ಣದ ಚಡ್ಡಿ,

ಮುಮಾ-2ಃ - ಶರ್ಟ್,

ಮುಮಾ-3 ಃಒಳಉಡುಪು

ಮುಮಾ-4ಃ ಮೃತನ ಮೊಬೈಲ್ ಎಂದು ಗುರುತಿಸಲಾಯಿತು.

8. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ಸಾಕ್ಷಿ ಆರೋಪಿತರನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಮಗ ಮತ್ತು 2ನೇ ಆರೋಪಿಯವರ ಮದುವೆಯ ಆಮಂತ್ರಣ ಪತ್ರಿಕೆ ಹಾಗೂ ಮದುವೆ ಪೊಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಆಮಂತ್ರಣ ಪತ್ರಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಆರೋಪಿತರ ಪರ ವಕೀಲರು ಗೈರು ಹಾಜರು. ಯಾವುದೇ ಮನವಿ ಪ್ರಾರ್ಥನೆ ಇಲ್ಲ. ಆರೋಪಿತರು ಈ ಸಾಕ್ಷಿಗೆ ಪಾಟೀ ಸವಾಲು ಮಾಡಲು ತಯಾರಿರುವುದಿಲ್ಲ. ವೇಳೆ ಕೇಳಿರುತ್ತಾರೆ. ಆದ್ದರಿಂದ ಆರೋಪಿ ಪರ ಪಾಟೀ ಸವಾಲು ಮಾಡಲು ಸಮಯ ಕೇಳಿದ್ದು, ರೂ.250/- ಖರ್ಚಿನೊಂದಿಗೆ ಆದೇಶ ಮಾಡಿ ಸಮಯ ನೀಡಲಾಯಿತು.

(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರು.,

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ